ಕಂ/ಉಪಲೋಕ್/ಬಿಡಿ/2157/2021
ಪಿ.ಓ.ಎ.ಆರ್.ಇ-5

# ಕರ್ನಾಟಕ ಲೋಕಾಯುಕ್ತ

**ಕಂಪ್ಲೇಂಟ್/ಉಪಲೋಕ್/ಬಿಡಿ/2157/2021**
**ಪಿಓ.ಎ.ಆರ್.ಇ-5(ಮಂಡನಾಧಿಕಾರಿಗಳ ಶಾಖೆ)**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 06/04/2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ: ಶ್ರೀ. ಎ. ಕುಮಾರ್ ಬಿನ್ ವೆಂಕಟಸುಬ್ಬಚೆಟ್ಟಿ, ಗ್ರಾಮಲೆಕ್ಕಾಧಿಕಾರಿ, ಬೆಟ್ಟಕೋಟೆ ವೃತ್ತ, ಚನ್ನರಾಯಪಟ್ಟಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ,**

ಆದ ನೀವು ಸರ್ಕಾರಿ/ ಸಾರ್ವಜನಿಕ ನೌಕರರಾಗಿದ್ದು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ದುರ್ನಡತೆ ತೋರಿದ ಕುರಿತಂತೆ ನಿಮ್ಮ ಮೇಲೆ ಶಿಸ್ತುಕ್ರಮ ಜರುಗಿಸುವ ಬಗ್ಗೆ.

****

1. ಆರಕ್ಷಕ ನಿರೀಕ್ಷಕರು ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆ ಬೆಂಗಳೂರು ಗ್ರಾಮಾಂತರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಸಲಾಗಿ. **ಶ್ರೀ. ಎ. ಕುಮಾರ್ ಬಿನ್ ವೆಂಕಟಸುಬ್ಬಚೆಟ್ಟಿ, ಗ್ರಾಮಲೆಕ್ಕಾಧಿಕಾರಿ, ಬೆಟ್ಟಕೋಟೆ ವೃತ್ತ, ಚನ್ನರಾಯಪಟ್ಟಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಆದ ನಿಮ್ಮ ಮೇಲೆ **ಶ್ರೀ. ಆರ್.ಟಿ. ಮಹೇಂದ್ರ ಬಿನ್ ಲೇಟ್ ತಿಮ್ಮೇಗೌಡ, ನಿಸರ್ಗ ಕಾಲೋನಿ, ಹೊರಮಾವು ಮುಖ್ಯ ರಸ್ತೆ, ಬೆಂಗಳೂರು** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ದೂರುದಾರರು, ಎನ್. ಗೋಪಾಲಯ್ಯ ಇವರಿಗೆ ದೇವನಹಳ್ಳಿ ತಾಲ್ಲೂಕು, ಜನ್ನೇಹಳ್ಳಿ ಗ್ರಾಮದ ರಿ.ಸ.ನಂ. 60/5 ವಿಸ್ತೀರ್ಣ 1 ಎಕರೆ 9 ಗುಂಟೆ ಜಮೀನನ್ನು ಮಾರಾಟ ಮಾಡಿದ್ದು, ಅದನ್ನು ಖಾತೆ ಮಾಡಲು ಎದುರುದಾರರು 50,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿಸಿದ ಬಗ್ಗೆ ಬರೆದುಕೊಂಡಿದ್ದು ಸದರಿ ದೂರು ಬೆಂಗಳೂರು ಗ್ರಾಮಾಂತರ ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ. 08/2017 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7, 13 (1) (d) r/w 13 (2) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರಾದ ನೀವು ಸರ್ಕಾರಿ ನೌಕರರಾಗಿ

ಕರ್ತವ್ಯ ನಿರ್ವಹಿಸುವ ಕಾಲಕ್ಕೆ 50,000/- ರೂ. ಲಂಚಕ್ಕೆ ಡಿಮ್ಯಾಂಡ್ ಮಾಡಿ 15,000/-ರೂ. ಲಂಚವನ್ನು ಪಡೆಯುವಾಗ ರೆಡ್‌ಹ್ಯಾಂಡಾಗಿ ಸಿಕ್ಕು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು-02 ಇವರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

**2. ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i. ದೂರುದಾರರಾದ **ಶ್ರೀ. ಆರ್.ಟಿ. ಮಹೇಂದ್ರ ಬಿನ್ ಲೇಟ್ ತಿಮ್ಮೇಗೌಡ, ನಿಸರ್ಗ ಕಾಲೋನಿ, ಹೊರಮಾವು ಮುಖ್ಯ ರಸ್ತೆ, ಬೆಂಗಳೂರು** ಇವರು ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ದೂರುದಾರರು ಎನ್. ಗೋಪಾಲಯ್ಯ ಇವರಿಗೆ ದೇವನಹಳ್ಳಿ ತಾಲ್ಲೂಕು, ಜನ್ನೇಹಳ್ಳಿ ಗ್ರಾಮದ ರಿ.ಸ.ನಂ. 60/5 ವಿಸ್ತೀರ್ಣ 1 ಎಕರೆ 9 ಗುಂಟೆ ಜಮೀನನ್ನು ಮಾರಾಟ ಮಾಡಿದ್ದು, ಅದನ್ನು ಖಾತೆ ಮಾಡಲು ಎದುರುದಾರರು 50,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಮುಂಗಡವಾಗಿ ಒಮ್ಮೆ 9,000/- ರೂ. ಮತ್ತೊಮ್ಮೆ 16,000/- ರೂ. ಹೀಗೆ ಒಟ್ಟು 25,000/- ರೂ. ಪಡೆದುಕೊಂಡು, ದಿ: 05/11/2017 ರಂದು ಎದುರುದಾರರು ದೂರುದಾರರಿಗೆ ಕರೆಮಾಡಿ ಬಾಕಿ 25,000/- ರೂ. ಲಂಚಕ್ಕೆ ಬೇಡಿಕೆ ಇಟ್ಟು ಈಗ 15,000/- ರೂ. ಕೊಡಬೇಕು, ಜಮೀನು ಖಾತೆಯಾದ ನಂತರ 10,000/- ರೂ. ಕೊಡಬೇಕೆಂದು ಲಂಚಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ: 07/11/2017 ರಂದು ಬೆಂಗಳೂರು ಗ್ರಾಮಾಂತರ ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.08/2017 ರಲ್ಲಿ ಕಲಂ 7, 13 (1) (d) r/w 13 (2) ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಮರಿಯಪ್ಪ (ನೆರಳುಸಾಕ್ಷಿ) 2) ಮಂಜುನಾಥ್ ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ದೂರುದಾರರು ಹಾಜರುಪಡಿಸಿದ ಮೆಮೊರಿ ಕಾರ್ಡ್‌ನಲ್ಲಿದ್ದ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ ಮತ್ತು ಸದರಿ

ಸಂಭಾಷಣೆಯನ್ನು ಲಿಪಿಕರಿಸಿಕೊಂಡು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆಯಿಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ ರೂ. 15,000/- (2,000X7, 500X2) ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಬೆರಳಚ್ಚು ಮಾಡಿಸಿದ್ದು, ನೋಟುಗಳ ನಂಬರುಗಳನ್ನು ಬೆರಳಚ್ಚು ಮಾಡಿದ ದಾಖಲೆಯೊಂದಿಗೆ ತಾಳೆ ಮಾಡಿ ಪಂಚರು ಖಾತ್ರಿಪಡಿಸಿಕೊಂಡಿರುತ್ತಾರೆ. ಪೊಲೀಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-2 ಮಂಜುನಾಥ್‌ರವರ ಮೂಲಕ ದೂರುದಾರರ ಪ್ಯಾಂಟ್ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಮಂಜುನಾಥ್‌ರವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಮರಿಯಪ್ಪ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ತಲೆ ಸವರಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 07-11-2017 ರಂದು ಸಮಯ ಮಧ್ಯಾಹ್ನ 3 ರಿಂದ 4.15 ಘಂಟೆಯವರೆಗೆ ಬೆಂಗಳೂರು ಗ್ರಾಮಾಂತರ ಎಸಿಬಿ ಕಛೇರಿಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿ ತಂಡದವರು, ಬೆಂಗಳೂರನ್ನು ಬಿಟ್ಟು ಸಾಯಂಕಾಲ 5.15 ಘಂಟೆಗೆ ದೇವನಹಳ್ಳಿಯನ್ನು ತಲುಪಿ, ವಾಹನವನ್ನು ತಹಶೀಲ್ದಾರ್ ಕಚೇರಿಯಿಂದ ಸ್ವಲ್ಪ ದೂರದಲ್ಲಿ ನಿಲ್ಲಿಸಿ, ದೂರುದಾರರು ಹಾಗೂ ನೆರಳುಸಾಕ್ಷಿ ಮರಿಯಪ್ಪರವರನ್ನು ತಹಶೀಲ್ದಾರ್ ಕಛೇರಿಯ ಒಳಗೆ ಕಳುಹಿಸಿ, ದಾಳಿ ತಂಡದವರು ಗೌಪ್ಯವಾಗಿ ಅಲ್ಲಲ್ಲಿ ಸ್ವಲ್ಪ ದೂರದಲ್ಲಿ ಕಾರ್ಯಾಲಯದ ಸುತ್ತಮುತ್ತ ಸಂಶಯಬರದಂತೆ ನಿಂತಿರುತ್ತಾರೆ. ದೂರುದಾರರು ಎದುರುದಾರರಿಗೆ ಫೋನ್ ಮಾಡಲಾಗಿ, ಎದುರುದಾರರು ತಾನು ತಹಶೀಲ್ದಾರ್ ಕಚೇರಿಯಲ್ಲಿಯೇ ಇರುವುದಾಗಿ, ಸ್ವಲ್ಪ ಹೊತ್ತಿನಲ್ಲಿ ಬರುವುದಾಗಿ ತಿಳಿಸಿದ್ದು, ಎದುರುದಾರರು ಬರಲಿಲ್ಲವಾದ್ದರಿಂದ,

ಕಂ/ಉಪಲೋಕ್/ಬಿಡಿ/2157/2021
ಪಿ.ಓ.ಎ.ಆರ್.ಇ-5

ದೂರುದಾರರು ಪುನ: ಫೋನ್ ಮಾಡಿರುತ್ತಾರೆ. ಕೊನೆಯದಾಗಿ, ಎದುರುದಾರರು 2ನೇ ಸಲ 5.40 ಕ್ಕೆ ದೂರುದಾರರಿಗೆ ಕರೆಮಾಡಿ ಕಚೇರಿ ಗೇಟಿನ ಬಳಿ ಬರುವಂತೆ ತಿಳಿಸಿರುತ್ತಾರೆ. ಆ ಪ್ರಕಾರ ದೂರುದಾರರು ಗೇಟಿನ ಬಳಿ ಬಂದಿದ್ದು, ಕಾರು ನಂ.ಕೆಎ.03 ಎಂ.ಹೆಚ್.7392 ಇದರ ಡ್ರೈವರ್ ಸೀಟಿನಲ್ಲಿ ಎದುರುದಾರರು ಕುಳಿತಿದ್ದು, ಮುಂದಿನ ಸೀಟಿನಲ್ಲಿ ದೂರುದಾರರು ಕುಳಿತುಕೊಂಡಿದ್ದು ಲಂಚದ ಹಣವನ್ನು ಎದುರುದಾರರು ಕೇಳಿ ಪಡೆದುಕೊಂಡು, ಎರಡೂ ಕೈಗಳಿಂದ ಎಣಿಸಿ, ತಮ್ಮ ಶರ್ಟ್‌ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ದೂರುದಾರರ ಸೂಚನೆಯ ಮೇರೆಗೆ ತಕ್ಷಣ ದಾಳಿತಂಡದವರು ಎದುರುದಾರರು ಇರುವ ಸ್ಥಳಕ್ಕೆ ಬಂದು, ತಮ್ಮ ಪರಿಚಯ ಮಾಡಿಕೊಂಡು ತನಿಖೆಗೆ ಸಹಕರಿಸುವಂತೆ ಎದುರುದಾರರಿಗೆ ತಿಳಿಸಿರುತ್ತಾರೆ. ಆ ಕಾಲಕ್ಕೆ ಮಳೆ ಬರುತ್ತಿದ್ದುದರಿಂದ ಮುಂದಿನ ಕ್ರಮ ಜರುಗಿಸಲು ಅನಾನುಕೂಲವಾದ್ದರಿಂದ ದೇವನಹಳ್ಳಿ ತಹಶೀಲ್ದಾರ್ ಕಚೇರಿಯ ಒಳಗೆ ಹೋಗಿ ಮುಂದಿನ ಕ್ರಮ ಜರುಗಿಸಿರುತ್ತಾರೆ. ಎದುರುದಾರರ ಎರಡೂ ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಹಣದ ಬಗ್ಗೆ ವಿಚಾರಿಸಲಾಗಿ, ಹಣವನ್ನು ಶರ್ಟ್ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿದ್ದು, ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚ-2 ಮಂಜುನಾಥ್‌ರವರು ಲಂಚದ ಹಣವನ್ನು ಶರ್ಟ್‌ಜೇಬಿನಿಂದ ತೆಗೆದು ಸದರಿ ನೋಟುಗಳ ನಂಬರ್‌ಗಳನ್ನು ತಾಳೆಮಾಡಿ ನೋಡಲಾಗಿ ನೋಟುಗಳ ನಂಬರುಗಳು ತಾಳೆಯಾದ ಮೇರೆಗೆ ತನಿಖಾಧಿಕಾರಿಗಳು ಹಣವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಶರ್ಟ್‌ಜೇಬಿನ ಒಳಭಾಗವನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಸದರಿ ಶರ್ಟನ್ನು ಕೂಡ ಅಮಾನತ್ತು ಪಡಿಸಿಕೊಂಡಿರುತ್ತಾರೆ. ದೂರುದಾರರು ಲಂಚ ನೀಡುವ ಕಾಲಕ್ಕೆ ನಡೆದ ಸಂಭಾಷಣೆಯನ್ನು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ಎದುರುದಾರರ ಸ್ವರಕ್ಷಣಾ ಹೇಳಿಕೆಯನ್ನು ಪಡೆದುಕೊಂಡಿದ್ದು, ಎದುರುದಾರರು ತಪ್ಪಾಗಿರುತ್ತದೆ ಎಂದು ಬರೆದುಕೊಟ್ಟಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳ ಬಗ್ಗೆ ವಿಚಾರಿಸಲಾಗಿ ತಂಬ್ ಇಂಪ್ರೆಶನ್ ಹಾಕುವುದರ ಸಲುವಾಗಿ ಶಿರಸ್ತೇದಾರ್ ಭೂಮಿಕೇಂದ್ರ ಇವರಲ್ಲಿ ಕೊಟ್ಟಿರುವುದಾಗಿ ನುಡಿದಿರುತ್ತಾರೆ. ದೇವನಹಳ್ಳಿ ತಹಶೀಲ್ದಾರ್ ಆದ ನಾರಾಯಣಸ್ವಾಮಿಯವರು ಹಾಜರಿದ್ದು, ಕಡತವನ್ನು ಭೂಮಿಕೇಂದ್ರದಿಂದ ತರಿಸಿ, ಪ್ರತಿಗಳಿಗೆ ದೃಢೀಕರಿಸಿದ ಮೇರೆಗೆ ದಾಖಲೆಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಟ್ರ್ಯಾಪ್ ಸಮಯದಲ್ಲಿ ಮಾತನಾಡಿದ ಸಂಭಾಷಣೆಯು ದೂರುದಾರರ ಮೊಬೈಲ್

ಮೆಮೊರಿ ಕಾರ್ಡಿನಲ್ಲಿ ರೆಕಾರ್ಡ್ ಆಗಿದ್ದು, ಸದರಿ ಸಂಭಾಷಣೆಯನ್ನು ಲಿಪಿಕರಿಸಿ ಮೆಮೊರಿ ಕಾರ್ಡನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಲಂಚಕ್ಕಾಗಿ ಬೇಡಿಕೆ ಇಟ್ಟ ಸಂಭಾಷಣೆಯನ್ನು ಕಂದಾಯ ನಿರೀಕ್ಷಕರಾದ ಚಿದಾನಂದ್ ಇವರಿಗೆ ಕೇಳಿಸಲಾಗಿ, ಸದರಿಯವರು ಸಂಭಾಷಣೆಯಲ್ಲಿಯ ಒಂದು ಧ್ವನಿಯು ಎದುರುದಾರರದೆಂದು ಗುರುತಿಸಿರುತ್ತಾರೆ. ಎದುರುದಾರರ ಸಂಭಾಷಣೆಯನ್ನು ಪ್ರತ್ಯೇಕರಿಸಿ ಅದನ್ನು ಮೂರು ಬಾರಿ ಓದಿಸುವ ಮೂಲಕ ಎದುರುದಾರರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡಿರುತ್ತಾರೆ. ಅದೇ ಪ್ರಕಾರ ದೂರುದಾರರ ಮಾದರಿ ಧ್ವನಿಯನ್ನು ಕೂಡ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ: 07/11/2017 ರಂದು ಸಾಯಂಕಾಲ 6 ರಿಂದ ರಾತ್ರಿ 10.30 ಗಂಟೆಯವರೆಗೆ ದೇವನಹಳ್ಳಿ ತಹಶೀಲ್ದಾರ್‌ರವರ ಕಚೇರಿಯಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

iv) ತನಿಖಾ ಕಾಲದಲ್ಲಿ ಎದುರುದಾರರ ಎರಡೂ ಕೈಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದು ರಾಸಾಯನಿಕ ಪರೀಕ್ಷಾ ವರದಿಯಿಂದ ಕಂಡುಬರುತ್ತದೆ. ಲಂಚಕ್ಕಾಗಿ ಬೇಡಿಕೆ ಇಟ್ಟ ಸಂಭಾಷಣೆಯಲ್ಲಿಯ ಧ್ವನಿಯು ಎದುರುದಾರರದೆಂದು ಚಿದಾನಂದ್, ಕಂದಾಯ ನಿರೀಕ್ಷಕರು ಗುರುತಿಸಿದ್ದಾರೆ.

v) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರಹೊಂದಿದ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

3. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಸಲ್ಲಿಸಿದ್ದು, ಸಮಜಾಯಿಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ಪರಿವೀಕ್ಷಣಾ ಟಿಪ್ಪಣಿಯಲ್ಲಿ ಎದುರುದಾರರ ವಿರುದ್ಧ ಮಾಡಲಾದ ಎಲ್ಲಾ ಆರೋಪಗಳನ್ನು ಅಲ್ಲಗಳೆದಿರುತ್ತಾರೆ. ನಾನು ದೂರುದಾರರಿಂದ ಖಾತೆ ಬದಲಾವಣೆ ಮಾಡಲು ಮುಂಗಡವಾಗಿ ಒಂದು ಬಾರಿ ರೂ. 9,000/- ಮತ್ತೊಂದು ಬಾರಿ 16,000/- ಪಡೆದುಕೊಂಡಿರುತ್ತೇನೆ ಎಂಬುದು ಸತ್ಯಕ್ಕೆ ದೂರವಾಗಿರುತ್ತದೆ. ನಾನು 50,000/- ಲಂಚಕ್ಕೆ ಬೇಡಿಕೆ ಇಟ್ಟಿದ್ದಕ್ಕೆ ಸಾಕ್ಷ್ಯಾಧಾರಗಳು ಇರುವುದಿಲ್ಲ. ನಾನು ದೂರುದಾರರಿಗೆ ನನ್ನನ್ನು ಭೇಟಿಯಾಗುವಂತೆ ದೂರವಾಣಿ ಕರೆ ಮಾಡಿರುವುದಿಲ್ಲ. ದಿ: 07/11/2017 ರಂದು ದೂರುದಾರರೇ ನನಗೆ ಮೇಲಿಂದ

ಮೇಲೆ ಕರೆ ಮಾಡಿ, ನನ್ನನ್ನು ಭೇಟಿಯಾಗಬೇಕೆಂದು ತಿಳಿಸಿ ನನ್ನ ಕಚೇರಿಯ ಬಳಿ ಬಂದಿರುತ್ತಾರೆ. ದೂರುದಾರರು ಖಾತಾ ಬದಲಾವಣೆಗೆ ನನ್ನನ್ನಾಗಲಿ ಇತರ ಅಧಿಕಾರಿನನ್ನಾಗಲಿ ಭೇಟಿ ಮಾಡುವ ಅವಶ್ಯಕತೆ ಇಲ್ಲ. ದಿ: 07/11/2017 ರಂದು ದೂರುದಾರರೇ ಬಂದು ತನ್ನನ್ನು ಭೇಟಿ ಮಾಡಿರುತ್ತಾರೆ. ಆ ಕಾಲಕ್ಕೆ ದೂರುದಾರರ ಯಾವುದೇ ಕೆಲಸ ಬಾಕಿ ಇರಲಿಲ್ಲ. ಸಬ್ ರಿಜಿಸ್ಟಾರ್ ಕಚೇರಿಯಲ್ಲಿ ಜಮೀನಿನ ಕ್ರಯ ನೋಂದಣಿಯಾದ ಮೇಲೆ ಭೂಮಿ ತಂತ್ರಾಶದ ಮುಖಾಂತರ ಸಂಬಂಧಪಟ್ಟ ಇಲಾಖೆಗೆ ವರ್ಗಾವಣೆಗೊಳ್ಳುತ್ತದೆ. ಭೂಮಿ ತಂತ್ರಾಂಶದಲ್ಲಿ ಚೆಕ್‌ಲಿಸ್ಟ್ ತಯಾರಾದ ದಿನದಿಂದ 30 ದಿನಗಳ ನಂತರ ಖಾತೆ ಬದಲಾವಣೆ ಪ್ರಕ್ರಿಯೆ ಪೂರ್ಣಗೊಳಿಸಬೇಕಾಗುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 03/10/2017 ರಂದು ಚೆಕ್‌ಲಿಸ್ಟ್ ತಯಾರಾಗಿದ್ದು, ನಮೂನೆ-21 ಅನ್ನು ಪ್ರಚಾರ ಪಡಿಸಿ, ನಿಗದಿತ ಅವಧಿಯಲ್ಲಿ ತಕರಾರು ಬಂದಿಲ್ಲವಾದ್ದರಿಂದ 30 ದಿನಗಳ ನಂತರ ಖಾತೆ ಬದಲಾವಣೆ ಆದೇಶ ಕೋರಿ ಆರ್.ಐ. ರವರಿಗೆ ನಿವೇದಿಸಿಕೊಂಡಿರುತ್ತೇನೆ. ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುವ ಸಂಭಾಷಣೆಯು ನನ್ನದಾಗಿರುವುದಿಲ್ಲ. ನಾನು ದಿ: 07/11/2017 ರಂದು ದೂರುದಾರರಿಗೆ ಕರೆ ಮಾಡಿರುವುದಿಲ್ಲ. ಆ ದಿವಸ ಮಳೆ ಬರುತ್ತಿದ್ದರಿಂದ ದೂರುದಾರರು ನನ್ನ ಕಾರಿನ ಒಳಗೆ ಬಂದು ಕೂತಿದ್ದು, ತಕ್ಷಣವೇ ಬಲವಂತವಾಗಿ ನನ್ನ ಶರ್ಟಿನ ಮೇಲ್ಭಾಗದ ಜೇಬಿಗೆ ಹಣವನ್ನು ಇಟ್ಟಿರುತ್ತಾರೆ. ನಾನು ಹಣವನ್ನು ಏಕೆ ಜೇಬಿನಲ್ಲಿ ಇರಿಸಿದ್ದೀರಿ ಎಂದು ಹಣವನ್ನು ವಾಪಸ್ಸು ಕೊಡುವಾಗ ಪೊಲೀಸ್‌ರು ಸ್ಥಳಕ್ಕೆ ಬಂದು ವಿನಾ ಕಾರಣ ನನ್ನನ್ನು ಬಂಧಿಸಿರುತ್ತಾರೆ. ಚಿದಾನಂದ ಆರ್.ಐ ಇವರು ನನ್ನ ಧ್ವನಿಯನ್ನು ಗುರ್ತಿಸಿರುವುದು ಸುಳ್ಳಿನಿಂದ ಕೂಡಿರುತ್ತದೆ. ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಕೈ ತೊಳೆದಾಗ ಗುಲಾಬಿ ಬಣ್ಣಕ್ಕೆ ತಿರುಗಿರುವುದು ನಂಬಲು ಸಾಧ್ಯವಿಲ್ಲ. ನಾನು ತಪ್ಪಾಗಿರುತ್ತದೆ ಎಂದು ರಕ್ಷಣಾ ಹೇಳಿಕೆಯನ್ನು ಬರೆದುಕೊಟ್ಟಿರುವುದಿಲ್ಲ. ಪೊಲೀಸ್‌ರು ಹೆದರಿಸಿ ನನ್ನಿಂದ ಸಮಜಾಯಿಷಿ ಬರೆಸಿಕೊಂಡಿದ್ದಾರೆ. ಉದ್ದೇಶಪೂರ್ವಕವಾಗಿ ನನಗೆ ತೊಂದರೆ ಕೊಡಬೇಕೆಂದು ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿ, ಸುಳ್ಳು ದೂರು ದಾಖಲಿಸಿರುತ್ತಾರೆ. ನಾನು ಯಾವುದೇ ದುರ್ನಡತೆ ತೋರಿರುವುದಿಲ್ಲ. ಈ ಮೇಲ್ಕಂಡ ಕಾರಣಗಳಿಂದ ಪ್ರಕರಣವನ್ನು ಮುಕ್ತಾಯ ಮಾಡಬೇಕೆಂದು ನಿವೇದಿಸಿಕೊಂಡಿದ್ದಾರೆ.

4. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪರಾಂಭರಿಸಲಾಗಿ, ಎದುರುದಾರರು ಮೇಲ್ಕಂಡಂತೆ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳನ್ನು ನಂಬದಿರಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ಒಪ್ಪಲು ಈ ಹಂತದಲ್ಲಿ ಬಲವಾದ ಹಾಗೂ ಸಮಂಜಸವಾದ ಆಧಾರಗಳಿರುವುದಿಲ್ಲ.

ಕಂ/ಉಪಲೋಕ್/ಬಿಡಿ/2157/2021
ಪಿ.ಓ.ಎ.ಆರ್.ಇ–5

5. ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ಹೊಂದಿರದೆ ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕ.ನಾ.ಸೇ. (ನಡತೆ) ನಿಯಮ, 1966, 3(1) (i) to (iv) ರ ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

6. ಆದ್ದರಿಂದ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅನ್ವಯ ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ಅನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ 3 ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

K.N. Phanindra 06/04/2022

(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)
ಉಪಲೋಕಾಯುಕ್ತರು–2
ಕರ್ನಾಟಕ ರಾಜ್ಯ, ಬೆಂಗಳೂರು.